ಅವರೂ ಈ ಗಲಾಟೆಯೊಳಗೇ ಮುಳುಗಿ ಎಲ್ಲೆಲ್ಲಿ ಬೆಂಕಿಯಿಡುತ್ತ ಅಲೆಯುತ್ತಿದ್ದಾರೋ, ಅಥವಾ ರಾಗುವನ್ನು ಪತ್ತೆ ಹಚ್ಚಿ ಹಳ್ಳಾರಿನಾಚೆ ಇರುವ ಕಾಡಿಗೆ ಉಪಾಯವಾಗಿ ಕರೆದೊಯ್ದು ನಾಲ್ಕು ಜಡಿದು ಬುದ್ಧಿ ಕಲಿಸುತ್ತಿದ್ದಾರೋ!!

ದಂಗೆ ಫಸಾದಿನಲ್ಲಿ ಮುಳುಗಿದ್ದ ಮಹೇಶ ತಾನ್ಯಾಕೆ ಕುಮಟೆಗೆ ಬಂದಿದ್ದು ಎಂದು ನೆನಪಾಗಿ ವಾಸ್ತವಕ್ಕೆ ಬರಲು ಮಧ್ಯಾಹ್ನ ನಾಲ್ಕು ಗಂಟೆಯೇ ಆಗಿಹೋಗಿತ್ತು. ಜೊತೆಯಲ್ಲಿದ್ದ ರಾಚನೂ ಬೇರೆಯಾಗಿಬಿಟ್ಟಿದ್ದ. ನಿನ್ನೆ ಮಾತಾಡಿ ನಿರ್ಧರಿಸಿದಂತೆ ಅವರೆಲ್ಲರೂ ಹಳ್ಳಾರಿನ ಕಾಡಿನಲ್ಲಿರುವ ದೊಡ್ಡಾಲದ ಬಳಿ ತನಗಾಗಿ ಕಾಯುತ್ತಿರಬೇಕೆಂದು ಅರಿವಾಗಿದ್ದೇ ಎದ್ದೆನಾ ಬಿದ್ದೆನಾ ಎಂದು ದಾಪುಗಾಲು ಹಾಕುತ್ತ ಹೊರಟುಬಿಟ್ಟ ಮಹೇಶ. ಬೆಳಿಗ್ಗೆಯಿಂದಲೂ ಒಂದು ನಿಮಿಷವೂ ಕೂರದೆ ಪೇಟೆತುಂಬ ಓಡಾಡಿ ಅವನ ಕಾಲುಗಳು ಅದಾಗಲೇ ಬಾತಿದ್ದವು. ಕಲ್ಲು, ಕಾವುಗಳನ್ನು ಬೀಸಿ ಬೀಸಿ ರಟ್ಟೆಗಳೆಲ್ಲ ಬಿದ್ದುಹೋದಂತಾಗಿದ್ದವು. ಪೊಲೀಸರ ಲಾಠಿ ಏಟು ಮಹೇಶನ ಕುಂಡೆಯ ಮೇಲೆ, ತೋಳು, ಬೆನ್ನು, ಭುಜಗಳ ಮೇಲೆಲ್ಲ ಕಡುನೀಲಿ ಬಾಸುಂಡೆಗಳನ್ನು ಮೂಡಿಸಿದ್ದವು. ರಾಗು ಈಗೇನಾದರೂ ತನಗೆದುರಾಗಿ ಬಂದರೆ ತಾನು ಅವನನ್ನು ಹೊಡೆಯುವುದಲ್ಲ, ತಾನೇ ಹೊಡೆತ ತಿನ್ನುವ ಸ್ಥಿತಿಯಲ್ಲಿದ್ದ ಮಹೇಶ.

ನುಜ್ಜುಗುಜ್ಜಾಗಿ ಹಣ್ಣಾಗಿದ್ದ ಮಹೇಶ ಈಗ ಯಾರ ಮೇಲೂ ಸೇಡು ತೀರಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಬಾಬುವಿನಂಗಡಿಯ ಸರ್ಕಾರಿ ಕೊಟ್ಟೆಯ ಅಮಲು ಪೊಲೀಸರ ಲಾಠಿಯೆದುರು ಸಪ್ಪೆಯೆನಿಸಿತ್ತು.

ಬರಬರನೆ ಹೆಜ್ಜೆ ಎತ್ತಿಡುತ್ತಿದ್ದರೂ ಹಳ್ಳಾರಿನ ದೊಡ್ಡಾಲಕ್ಕೆ ಇನ್ನೂ ಹದಿನೈದು ನಿಮಿಷದ ಹಾದಿ ಬಾಕಿಯಿತ್ತು. ಬೆಳಿಗ್ಗೆಯಿಂದ ರಾಚ, ಪಾಚು, ಮೆಸ್ತ ಯಾರೊಬ್ಬರ ಸುಳಿವಿರಲಿಲ್ಲ. ಅದಾಗಲೇ ಅವರು ದೊಡ್ಡಾಲಕ್ಕೆ ಬಂದು ಹೋದರೋ, ಬರಲೇ ಇಲ್ಲವೋ. ಹಡಬಿಟ್ಟಿಗಳು ಸಿಗಲಿ, ಸೇಡು ಗೀಡು ಏನೂ ಬೇಡ, ನಮ್ಮ ಪಾಡಿಗೆ ನಾವಿದ್ದು ಬಿಡುವಾ ಎಂದು ಹೇಳಿಬಿಡಬೇಕೆಂದು ವಿಪರೀತ ಪೆಟ್ಟು ತಿಂದು ಶೆಳೆಯುತ್ತಿರುವ ಅಂಡನ್ನು ತಿಕ್ಕಿಕೊಳ್ಳುತ್ತ ಮನಸ್ಸಲ್ಲೇ ನಿಕ್ಕಿ ಮಾಡಿಕೊಂಡ ಮಹೇಶ.

'ಅಪಮಾನವಾಗಿದ್ದು, ಸೋಲಾಗಿದ್ದು ನನಗೆ. ನನಗೇ ನನ್ನ ಕೆಲಸದ ಅರಿವಿರದಿದ್ದಾಗ ಇನ್ನು ನನ್ನ ಒತ್ತಾಯಕ್ಕೆ ಮಣಿದು ನನ್ನ ಮಂಡಳಿಯವರು ಹಗೆತನ ಸಾಧಿಸಲು ಒಪ್ಪಿದರೂ ಅರಬರೆ

